# ತಿರುಕರು

ಗಿರಡ್ಡಿ ಗೋವಿಂದರಾಜ

**ಮುದುಕರ ಆ ಮಾತು ಕೇಳಿದಾಗ ಅವರ ಬಗ್ಗೆ ಏನೇನೋ ಯೋಚಿಸಿ, ಏನೇನೋ ನಿರೀಕ್ಷಿಸುತ್ತಾ ದುಗುಡ ತುಂಬಿದ ಮನ ಒಮ್ಮೆಲೆ ಬರಿದಾದಂತೆ ತೋರಿತು**

ಬೆಳಗಿನ ಹತ್ತು ಗಂಟೆಯ ಸಮಯ. ಬೆಂಗಳೂರಿನ ಮುಖ್ಯ ರಸ್ತೆಗಳಲ್ಲಿ ಆಗಲೇ ವಾಹನ ಸಂಚಾರ ಹೆಚ್ಚತೊಡಗಿತ್ತು. ಬೆಂಗಳೂರು ನೋಡಲು ತಾನೂ ಬರುತ್ತೇನೆಂದು ಹಟಹಿಡಿದು ಈ ಬಾರಿ ನನ್ನ ಕೂಡ ಬಂದಿದ್ದ ಹನ್ನೆರಡು ವರ್ಷದ ನನ್ನ ಮಗಳು ಗೌರಿಯನ್ನು ಕರೆದುಕೊಂಡು ಮೆಜೆಸ್ಟಿಕ್ ಬಳಿ ಎಚ್ಚರಿಕೆಯಿಂದ ರಸ್ತೆಯನ್ನು ದಾಟುತ್ತಿದ್ದೆ.

ಅಷ್ಟರಲ್ಲಿ ಯಾರೋ ಹಿಂದಿನಿಂದ 'ಸರ್... ಸರ್...' ಎಂದು ಕೂಗುತ್ತ ಅವಸರದಿಂದ ಹಿಂಬಾಲಿಸಿ ಬಂದಂತೆ ಆಯಿತು. ನಮ್ಮ ಊರಿನಲ್ಲಾದರೆ ಹೈಸ್ಕೂಲು – ಕಾಲೇಜುಗಳಲ್ಲಿ ಅಧ್ಯಾಪಕರಾದವರಿಗೆ ಮಾತ್ರ ಸಲ್ಲುವ ವಿಶೇಷ ಮರ್ಯಾದೆ ಇದು. ಬೆಂಗಳೂರಿನಲ್ಲಿ ಎಲ್ಲರೂ 'ಸರ್'ಗಳೇ. ಹೀಗಾಗಿ ಆ ಕೂಗು ನನಗಾಗಿ ಇರಬಹುದಾದ ಸಾಧ್ಯತೆ ಬಹಳ ಕಡಮೆ ಎಂದುಕೊಂಡು, ಮುನ್ನೋಡಿ ರಸ್ತೆ ದಾಟಿದೆ. ದಾಟಿ ಫುಟ್‌ಪಾತಿಗೆ ಬರುತ್ತಿದ್ದಂತೆಯೇ ಹಿಂದಿನಿಂದ ಇನ್ನೂ 'ಸರ್... ಸರ್...' ಎನ್ನುತ್ತಲೇ ಇದ್ದ ವ್ಯಕ್ತಿ ನನ್ನೆದುರಿಗೇ ಬಂದು

'ಮಯೂರ'ದ 48 ವರ್ಷಗಳ ಸುದೀರ್ಘ ಪಯಣದಲ್ಲಿ ಕನ್ನಡದ ಸಿದ್ಧಪ್ರಸಿದ್ಧರು ಜೊತೆಯಾಗಿದ್ದಾರೆ. ಈ ನವಿಲಿನ ನಡಿಗೆಯಲ್ಲಿ ಕಂಡ ಮೋಹಕ 'ನವಿಲುಗರಿ'ಗಳನ್ನು ಒಂದೊಂದಾಗಿ ಹೆಕ್ಕಿ ಈ ಅಂಕಣ ಮುಂದಿಡುತ್ತದೆ. ಈ ನವಿಲುಗರಿಗಳು ಹಲವು ಓದುಗರ ನೆನಪುಗಳನ್ನು ಮಧುರವಾಗಿ ನೇವರಿಸುವುದಲ್ಲದೇ ಹೊಸ ಓದುಗರಿಗೆ ಹಳೆಯ ಬರಹಗಳ ಅಂದವನ್ನು ಪರಿಚಯಿಸುತ್ತವೆ. ಇದು, 1980ರ ಫೆಬ್ರುವರಿ ತಿಂಗಳ ಸಂಚಿಕೆಯಿಂದ ಆಯ್ದ ಬರಹ. ಚಿತ್ರ ಚಂದ್ರನಾಥ ಆಚಾರ್ಯ ಅವರದು.